# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1164

2 ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು)

3 ಉತ್ತರಿಸುವ ದಿನಾಂಕ : 19-12-2024

4 ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಕಲಿ 'ಎ' ಖಾತೆ ಸೃಷ್ಟಿಯಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುವ ಬಗ್ಗೆ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ತನಿಖೆ ನಡೆಸಿದೆಯೇ; (ದೂರುಗಳ ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಉಪ ವಿಭಾಗಗಳಲ್ಲಿ "ಬಿ" ವಹಿಯಲ್ಲಿರುವ ಆಸ್ತಿಗಳನ್ನು ಅಕ್ರಮವಾಗಿ "ಎ" ಖಾತೆಗೆ ಸೇರಿಸಲಾಗಿದೆ ಎಂದು ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರಗಳ ಆಧಾರ ಮೇಲೆ ತನಿಖೆ ನಡೆಸಲು ಪರಿಶೀಲನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಮುಂದಿನ ಕ್ರಮ ಕೈಗೊಳ್ಳಲು ವರದಿಯನ್ನು ನಿರೀಕ್ಷಿಸಲಾಗಿದೆ. |
| ಆ) | ಎಷ್ಟು ನಕಲಿ 'ಎ' ಖಾತಾ ಸೃಷ್ಟಿಸಲಾಗಿದೆ; ಇದರಿಂದ ಆಗಿರುವ ನಷ್ಟ ಎಷ್ಟು; ಬೆಳಕಿಗೆ ಬಂದಿರುವ ಪ್ರಕರಣಗಳ ಹೊರತಾಗಿ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ನಡೆದಿರುವ ಈ ರೀತಿಯ ಪ್ರಕರಣಗಳನ್ನು ಪತ್ತೆ ಹಚ್ಚಲು ಉನ್ನತ ಮಟ್ಟದ ತನಿಖೆಗೆ ಸರ್ಕಾರ ಆದೇಶಿಸುವುದೇ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) | |
| ಇ) | ನಕಲಿ "ಎ" ಖಾತೆ ಸೃಷ್ಟಿಸಿರುವ ಪ್ರಕರಣಗಳಲ್ಲಿ ಎಷ್ಟು ಜನ ಅಧಿಕಾರಿ/ನೌಕರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಎಷ್ಟು ಜನರನ್ನು ಬಂದಿಸಲಾಗಿದೆ; (ಅಧಿಕಾರಿ/ನೌಕರರ ವಿವರ ನೀಡುವುದು) | |
| ಈ) | ಅಕ್ರಮವಾಗಿ ನೀಡಿರುವ "ಎ" ಖಾತೆ ರದ್ದು ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈವರೆಗೆ ರದ್ದುಗೊಂಡಿರುವ "ಎ" ಖಾತೆ ಆಸ್ತಿಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು) | |

| | | |
|---|---|---|
| ಉ) | ನಕಲಿ "ಎ" ಖಾತಾ ಸೃಷ್ಟಿ ವಿಚಾರದಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆ ಏನು; ನ್ಯಾಯಾಲಯದ ಸೂಚನೆಯನ್ನು ಪಾಲಿಸಲಾಗಿದೆಯೇ? (ವಿವರ ನೀಡುವುದು) | ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2 ಸ್ವತ್ತುಗಳ ಮಾಲೀಕರುಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:27161/2023 ಮತ್ತು 18185/2023 ರನ್ನು ದಾಖಲಿಸಿರುತ್ತಾರೆ. ಈ ಎರಡೂ ಪ್ರಕರಣಗಳನ್ನು ಕನೆಕ್ಟ್ ಮಾಡಿ ವಿಚಾರಣೆ ನಡೆಸಿರುವ ಮಾನ್ಯ ನ್ಯಾಯಾಲಯವು ದಿನಾಂಕ:10–01–2024ರ ದೈನಂದಿನ ಆದೇಶದಲ್ಲಿ ಯಥಾಸ್ಥಿತಿ ಮುಂದುವರೆಸುವಂತೆ ರಿಟ್ ಅರ್ಜಿ ಸಂಖ್ಯೆ:27161/2023ರಲ್ಲಿ ಮಧ್ಯಂತರ ಆದೇಶವನ್ನು ನೀಡಿರುತ್ತದೆ. |

**ಸಂಖ್ಯೆ: ನಅಇ 218 ಬಿಬಿಎಸ್ 2024(ಇ)**

(**ಡಿ.ಕೆ. ಶಿವಕುಮಾರ್**)
ಉಪ ಮುಖ್ಯಮಂತ್ರಿ